ಒಳಗಾಗಿರುವ ಮನುಷ್ಯನನ್ನು ಈ ಚಟದಿಂದ ತಪ್ಪಿಸುವುದಕ್ಕೆ ಸಾಧ್ಯವಿಲ್ಲವೆಂದು ಹಾಗಾದರೆ ಶೇಂದಿಯನ್ನು ನಿಷೇಧ ಮಾಡಿದಮೇಲೆ ಅದಕ್ಕೆ ಪರ್ಯಾಯವಾಗಿ ಏನು ಮಾಡುತ್ತೀರಿ ಎಂದು ನಾನು ಮಾನ್ಯ ವಂಚಿತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ಡಿ. ಬಿ. ಇನಾಂದಾರ್.—ಆಂಬ್ಯಾಕ್ ಸಿಗುತ್ತಿದೆ. ಅದನ್ನು ಸೇವನೆ ಮಾಡಬಹುದು.

ಶ್ರೀ ಪಟ್ಟಣಶೆಟ್ಟಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ. ನನ್ನದೊಂದು ಕ್ಲಾರಿಫಿಕೇಷನ್ ಇದೆ.

ಅಧ್ಯಕ್ಷರು.—ಆಗುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದು ಹೋಗಿದೆ. ಇನ್ನು ಮುಂದೆ ವಂಚಿತರಾದ ಪ್ರಶ್ನೆ. ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಕೇಳುತ್ತಾರೆ. ಶ್ರೀ ಖರ್ಗೆಯವರೇ, ನೀವು ಪ್ರಶ್ನೆಯನ್ನು ಕೇಳಿ.

ಮುಂದೂಡಲಾದ ಪ್ರಶ್ನೆ

ಸಣ್ಣ ಉಳಿತಾಯದ ಕುರಿತು

೧೬೧೧. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸಣ್ಣ ಉಳಿತಾಯ ಹಣಕಾಸು ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಣ್ಣ ಉಳಿತಾಯವನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲು ಸರ್ಕಾರದವರು ಕೈಗೊಂಡಿರುವ ವಿವಿಧ ಕಾರ್ಯಕ್ರಮಗಳೇನು ?

ಆ) ೧೯೮೮-೮೯ನೇ ಸಾಲಿನಲ್ಲಿ ಸಣ್ಣ ಉಳಿತಾಯಕ್ಕೆ ಸರ್ಕಾರದವರು ಎಷ್ಟು ಗುರಿಯನ್ನು ರಾಜ್ಯಾದ್ಯಂತ ತೊಡಗಿಸಲು ಉದ್ದೇಶಿಸಿದೆ ?

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಹಣಕಾಸು ಮತ್ತು ಬಂದೀಖಾನೆ ರಾಜ್ಯ ಸಚಿವರು).—

ಅ) ಕೇಂದ್ರ ಸರ್ಕಾರದ ನಿರ್ದೇಶನದಂತೆ ಸಣ್ಣ ಉಳಿತಾಯವನ್ನು ಕರ್ನಾಟಕದಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.—

(೧) ನಗರ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕೃತ ಏಜೆಂಟರುಗಳನ್ನು ನೇಮಿಸಿ ಅವರ ಮುಖೇನ ಸಣ್ಣ ಉಳಿತಾಯ ಯೋಜನೆಗಳಿಂದ ಲಭ್ಯವಾಗುವ ಉಪಯೋಗಗಳನ್ನು ಪ್ರಚಾರ ಪಡಿಸಿ ಅವರುಗಳ ಮೂಲಕ ಸಣ್ಣ ಉಳಿತಾಯದ ಪ್ರಯೋಜನಗಳ ಬಗ್ಗೆ ತಿಳುವಳಿಕೆ ನೀಡುವುದು. ಇವರುಗಳ ಸಂಗ್ರಹಣೆ ಮಾಡಿದ ಮೊತ್ತಕ್ಕೆ ಕೇಂದ್ರ ಸರ್ಕಾರದ ವತಿಯಿಂದ ಶೇಖಡ ೨ ರಷ್ಟು ಮತ್ತು ಕರ್ನಾಟಕ ಸರ್ಕಾರವು ಶೇಖಡ ೧ ರಷ್ಟು ಪ್ರೋತ್ಸಾಹ ಧನವನ್ನು ಕೊಡುತ್ತಿದೆ.

(೨) ಎಲ್ಲಾ ಇಲಾಖೆಗಳ ಅಧಿಕಾರಿಗಳ ಮೂಲ ಸಣ್ಣ ಉಳಿತಾಯದ ಬಗ್ಗೆ ಜನರಿಗೆ ತಿಳುವಳಿಕೆ ನೀಡಿ ಹೆಚ್ಚಿನ ಲಾಭ ಪಡೆಯುವಂತೆ ಮಾಡುವುದು.

(೩) ಕೇಂದ್ರ ಸರ್ಕಾರದವರು ಸಣ್ಣ ಉಳಿತಾಯವನ್ನು ಪ್ರೋತ್ಸಾಹಿಸುವ ಸಲುವಾಗಿ ಕಳುಹಿಸಿರುವ ಡಾಕ್ಯುಮೆಂಟರಿ ಫಿಲ್ಮ್‌ಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ರಾಜ್ಯ ಸರ್ಕಾರದ ವತಿಯಿಂದ ಪ್ರದರ್ಶಿಸುವುದು.

(೪) ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವ ಮಂಡಲ ಪಂಚಾಯಿತಿಗಳು ಆಸಕ್ತಿ ವಹಿಸಿ ಹೆಚ್ಚಿನ ಪ್ರಗತಿಯನ್ನು ಸಣ್ಣ ಉಳಿತಾಯದಲ್ಲಿ ತೋರಿಸಿದರೆ ಪ್ರೋತ್ಸಾಹ ಧನವನ್ನು ಕೊಡುವ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ.

(೫) ಸಣ್ಣ ಉಳಿತಾಯ ಅಧಿಕೃತ ಏಜೆಂಟರುಗಳು ಸಂಘ ಸಂಸ್ಥೆಗಳು ಕಾರ್ಖಾನೆಗಳ ಪ್ಲಾಂಟೇಷನ್‌ಗಳ ಮತ್ತು ಇತರ ಉದ್ಯಮಗಳ ಸಮೂಹದ ಮುಖಂಡರುಗಳಿಗೆ ಅಧಿಕಾರಿಗಳು ಮತ್ತು ನೌಕರರುಗಳಿಗೆ ಅವರುಗಳು ಸಂಗ್ರಹಿಸಿದ ಮೊಬಲಗಿನ ಮೇಲೆ ಪ್ರೋತ್ಸಾಹಕ ಬಹುಮಾನ ನೀಡಲಾಗುತ್ತಿದೆ.

ಆ) ೧೯೮೮ ನೇ ಸಾಲಿನಲ್ಲಿ ರಾಜ್ಯಂದ್ಯಂತ ಕರ್ನಾಟಕ ಸರ್ಕಾರವು ಒಟ್ಟು ೭೦೦ ಕೋಟಿ ಮತ್ತು ನಿವ್ವಳ ೩೫೦ ಕೋಟಿ ರೂಪಾಯಿಗಳನ್ನು ಸಣ್ಣ ಉಳಿತಾಯದಲ್ಲಿ ಸಂಗ್ರಹಿಸಲು ಉದ್ದೇಶಿಸಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರ ಪರವಾಗಿ),— ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಸಾಲಿನಲ್ಲಿ ೭೦೦ ಕೋಟಿ ಮತ್ತು ನಿವ್ವಳ ೩೫೦ ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡುವಂಥ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಆದರೆ ೧೯೮೭-೮೮ನೇ ಸಾಲಿನಲ್ಲಿ ತಮ್ಮ ಗುರಿ ಏನಿತ್ತು, ಮತ್ತು ಎಷ್ಟು ಸಾಧನೆಯನ್ನು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ? ಎರಡನೆಯದು, ಈ ರೀತಿ ಸಂಗ್ರಹಿಸಿದಂಥ ಹಣದಲ್ಲಿ ಮರುಪಾವತಿಯಾಗಿ, ಲೋನ್ ರೂಪದಲ್ಲಿ ಅಥವಾ ನಮಗೆ ಎನ್‌ಕರೇಜ್‌ಮೆಂಟ್ ಎಂದು ಹೇಳಿ ಸಿಗತಕ್ಕ ಹಣ ಎಷ್ಟು? ಕೇಂದ್ರ, ಸರ್ಕಾರದಿಂದ ಲೋನ್ ರೂಪದಲ್ಲಿ ಅಸಿಸ್ಟೆನ್ಸ್ ರೂಪದಲ್ಲಿ ಸಿಗತಕ್ಕಂಥ ಹಣ ಎಷ್ಟು? ಮತ್ತು ಈಗ ನಿಗದಿ ಮಾಡಿರುವಂಥ ಗುರಿ ಏನಿದೆ, ಅದರಲ್ಲಿ ಬರತಕ್ಕ ಹಣ ಎಷ್ಟು?

ಶ್ರೀ ವೀರಣ್ಣ,— ಮಾನ್ಯ ಅಧ್ಯಕ್ಷರೇ, ೧೯೮೭-೮೮ ನೇ ಸಾಲಿನಲ್ಲಿ ೬೦೦ ಕೋಟಿ ಮತ್ತು ನಿವ್ವಳ ೩೫೫ ಕೋಟಿ ರೂಪಾಯಿಗಳ ಗುರಿ ಇತ್ತು. ಇದರಲ್ಲಿ ೬೦೩ ಕೋಟಿ ರೂಪಾಯಿಗಳ ಗುರಿಯನ್ನು ಸಾಧನೆ ಮಾಡಿದ್ದೇವೆ. ಮತ್ತೆ ೧೯೮೭-೮೮ರಲ್ಲಿ ೧೪೩ ಕೋಟಿ ೯೯ ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಹಣ ಲೋನ್ ರೂಪದಲ್ಲಿ ಬಿಡುಗಡೆ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಪ್ರೋತ್ಸಾಹಧನವನ್ನು ತಾವು ಈಗಾಗಲೇ ಏನು ನಮೂದು ಮಾಡಿದ್ದೀರಿ, ೩ ಪರ್ಸೆಂಟ್, ೨ ಪರ್ಸೆಂಟ್ ಎಂದು ಈ ರೂಪದಲ್ಲಿ ಸಿಗತಕ್ಕ ಹಣ ಎಷ್ಟು ಎಂದು ಹೇಳಬೇಕು.

ಶ್ರೀ ವೀರಣ್ಣ.— ಪ್ರೋತ್ಸಾಹ ರೂಪದಲ್ಲಿ ೧೯೮೫-೮೬ನೇ ಇಸವಿಯಲ್ಲಿ ಕರ್ನಾಟಕ ಸರ್ಕಾರ ನ್ಯಾಷನಲ್ ಆವರೇಜ್‌ನಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದಕ್ಕೆ ಪ್ರೋತ್ಸಾಹಧನವಾಗಿ ಕೇಂದ್ರ ಸರ್ಕಾರ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಮಂತ್ರಿ ತಮ್ಮ ಮಾಹಿತಿಗಾಗಿ ೧೯೮೫-೮೬ನೇ ಸಾಲಿನಿಂದ ಇಲ್ಲಿಯವರೆಗೂ ೫೯ ಕೋಟಿ ೨೯ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ, ಸಾಲದ ರೂಪದಲ್ಲಿ ಸಣ್ಣ ಉಳಿತಾಯದ ಮೂಲಕ ಬಿಡುಗಡೆ ಮಾಡಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

೧೭೬೨. ಶ್ರೀ ಆರ್.ಎನ್. ನಾಯಕ್,(ಭಟ್ಕಳ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹುಟ್ಟಿದ ಜಿಲ್ಲೆಗಳಲ್ಲಿಯೇ ಕೆಲಸ ಮಾಡುತ್ತಿರುವ ಸಬ್‌ಇನ್ಸ್‌ಪೆಕ್ಟರ್ ಮತ್ತು ಅದಕ್ಕೂ ಮೇಲ್ದರ್ಜೆಯ ಪೋಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ಎಷ್ಟು ಪೋಲೀಸ್ ಅಧಿಕಾರಿಗಳು ಅದೇ ಜಿಲ್ಲೆಯಲ್ಲಿ ಯಾವ ಯಾವ ಕಡೆ ಕೆಲಸ ನಿರ್ವಹಿಸುತ್ತಿದ್ದಾರೆ.?